ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Friday, the 11th July, 1980/Ashada 20, 1902 S.E.

The House met in the Assembly Chamber, Vidhana Soudha, at Nine of the Clock.

MR. SPEAKER (SRI P. VENKATARAMANA) in the Chair.

STARRED QUESTIONS
(To which oral answers were given)

Loss in Kimco Factory

149. SRI K.H. HANUME GOWDA (Hassan).—Will the Chief Minister be pleased to state.—

(*a*) the amount of loss incurred by the KIMCO factory, Hassan during the last three years :

(*b*) the reason for running the factory under loss ;

(*c*) the action intended to be taken by the Government to run this factory in a profitable manner?

SRI M. VEERAPPA MOILY.—(Minister for Finance and Planning) [on behalf of SRI R. GUNDU RAO (Chief Minister)].—

(*a*) during.

1976-77	Rs.	13,58,637-48
1977-78	Rs.	25,83,855-00
1978-79	Rs.	23,80,126-29

(*b*) .....

1. Scarcity of technical know-how and inputs.
2. Competition by other producers.
3. Sale price being less than the production cost.

(*c*) .....

1. Technical know-how and inputs have been improved.

2. Arrangements have been made to get the supply of Steel at cheaper rate.

3. Sale prices have been increased.

4. Question of increasing the capital investment of the company is under consideration.

ಶ್ರೀ ಕೆ.ಎಚ್. ಹನುಮೇಗೌಡ.—ಹಾಸನದ ಇಂಪ್ಲಿಮೆಂಟ್ ಫ್ಯಾಕ್ಟರಿಯು ಒಂದು ಪ್ರತ್ಯೇಕ ಯೂನಿಟ್ ಆಗಿದ್ದಾಗ ಅಂದರೆ ೩-೪ ವರ್ಷಗಳ ಹಿಂದೆ ಇಷ್ಟೊಂದು ಲುಕ್ಷಾನಾಗುತ್ತಿರಲಿಲ್ಲ. ವರ್ಷಕ್ಕೆ ೨ ರಿಂದ ೫ ಲಕ್ಷ ರೂಪಾಯಿಗಳವರೆಗೆ ಮಾತ್ರ ಲುಕ್ಷಾನಾಗುತ್ತಿತ್ತು. ಆದರೆ ಬೆಂಗಳೂರಿನ ಯೂನಿಟ್‌ನ್ನು ಇದರ ಜೊತೆಯಲ್ಲಿ ಸೇರಿಸಿ ಒಂದು ಕಂಪನಿ ಎಂದು ಮಾಡಿದ ಮೇಲೆ ಲಕ್ಷಗಟ್ಟಲೆ ಲುಕ್ಸಾನಾಗುತ್ತಿದೆ. ಕಳೆದ ೩ ವರ್ಷಗಳಲ್ಲಿ ಎಷ್ಟು ಲುಕ್ಸಾನಾಗಿದೆ ಎಂಬುದನ್ನು ಇಲ್ಲಿ ಕೊಟ್ಟಿದ್ದಾರೆ. ಈ ವರ್ಷ ಇದು ೩೦ ಲಕ್ಷದ ಮೇಲೆ ಹೋಗುತ್ತದೆಂದು ಕೇಳಿದ್ದೇನೆ. ಈ ರೀತಿ ಲುಕ್ಸಾನಾಗುವುದಕ್ಕೆ ಕಾರಣವೇನು?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರಿನ ಯೂನಿಟ್ ಚೆನ್ನಾಗಿ ಕೆಲಸ ನಿರ್ವಹಿಸುತ್ತಿದೆ. ಆದರೆ ಹಾಸನದ ಯೂನಿಟ್ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹಾಸನದ ಯೂನಿಟ್‌ಗೆ ವಿ.ಐ.ಎಸ್.ಎಲ್. ನವರು ೫೦ ಲಕ್ಷ ರೂಪಾಯಿಗಳ ಸ್ಟೀಲ್ ಸರಬರಾಜು ಮಾಡಿದ್ದಾರೆ. ಈ ಹಣವನ್ನು ೬ ಕಂತುಗಳಲ್ಲಿ ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಇಲ್ಲಿ ನಷ್ಟವಾಗುವುದಕ್ಕೆ ಅನೇಕ ಕಾರಣಗಳಿವೆ. ವಿವರಗಳನ್ನು ಇಲ್ಲಿ ಕೊಟ್ಟಿದ್ದೇವೆ. ಪ್ರಮುಖವಾದ ಕಾರಣವೆಂದರೆ, ಕಚ್ಚಾ ಮಾಲಿನ ಸರಬರಾಜು. ಮತ್ತು ಇಲ್ಲಿ ತಯಾರಾದ ಮಾಲನ್ನು ರೈಲ್ವೇಸ್‌ಗೆ ಏನು ಸಪ್ಲೈ ಮಾಡಲಾಗುತ್ತಿದೆ, ಅದು ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಒಟ್ಟಿನಲ್ಲಿ ಈ ಒಂದು ನಷ್ಟವನ್ನು ಕಡಿಮೆ ಮಾಡುವ ಬಗ್ಗೆ ನಾವು ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತಿದ್ದೇವೆ.

ಶ್ರೀ ಕೆ ಹೆಚ್. ಹನುಮೇಗೌಡ.—ಅಲ್ಲಿ ಆಫ್ಶೋದು ಲಾಸ್ ಆಗಬೇಕಾದರೆ, ಅಲ್ಲಿ ಕಿಮ್‌ಕೋ ಆದಮೇಲೆ ಮ್ಯಾನೇಜ್‌ಮೆಂಟ್‌ನವರಿಗೂ ಮತ್ತು ಕಾರ್ಮಿಕವರ್ಗದವರಿಗೂ ಹೊಂದಾಣಿಕೆ ಇಲ್ಲದಿರುವುದೇ ಕಾರಣವಾಗಿದೆ. ಮೊದಲು ಅದು ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿ ಆಗಿದ್ದಾಗ ಒಂದು ವರ್ಷದಲ್ಲಿ ೯-೧೦ ಟನ್‌ಗಳಷ್ಟು ಇಂಪ್ಲಿಮೆಂಟ್ಸ್ ಉತ್ಪತ್ತಿ ಆಗುತ್ತಿತ್ತು. ಈಗ ಅದು ಒಂದು ಟನ್‌ಗೆ ಇಳಿದಿದೆ. For the last 1½ years the production per day has come down to 1 to 1½ tons. ಉತ್ಪತ್ತಿ ಆಫ್ಶೋದು ಆಧೋಗತಿಗೆ ಹೋಗಿ ಕಂಪನಿಗೆ ಲಾಸ್ ಆಗಬೇಕಾದರೆ ಸರ್ಕಾರ ಏತಕ್ಕೆ ಕಣ್ಣುಮುಚ್ಚಿಕೊಂಡು ಕುಳಿತಿದೆ ಎಂದು ಕೇಳುತ್ತೇನೆ. ಮೊದಲು ಇಂಪ್ಲಿಮೆಂಟ್ಸ್‌ನ ಕ್ವಾಲಿಟಿ ಚೆನ್ನಾಗಿ ಇಲ್ಲ ಎಂದು ಲಾಸ್ ಆಗುತ್ತಿತ್ತು. ಈ ಫ್ಯಾಕ್ಟರಿಯನ್ನು ಏನಾದರೂ ಮಾಡಿ ಉಳಿಸಬೇಕು ಎಂದು ಹೇಳಿ ಕಿಮ್ಕೋ ಫ್ಯಾಕ್ಟರಿ ಎಂದು ಮಾಡಿದರು. ಕಿಮ್ಕೋ ಫ್ಯಾಕ್ಟರಿ ಆದರೂ ಕೂಡ ಕ್ವಾಲಿಟಿಯಲ್ಲಿ ಇಂಪ್ರೂವ್‌ಮೆಂಟ್ ಆಗಲಿಲ್ಲ. ೧೯ಕ್ಕೆ ೪೯ಷ್ಟು ಲಾಸ್ ಆಯಿತು. ಈಗ ಕ್ವಾಲಿಟಿ ಇಂಪ್ಲಿಮೆಂಟ್ಸನ್ನು ಪ್ರೊಡ್ಯೂಸ್ ಮಾಡತಕ್ಕಂಥಾದರಲ್ಲಿ ಕಂಪನಿ ಕಂಪ್ಲೀಟ್ ಆಗಿ ಫೈಲ್ಯೂರ್ ಆಗಿದೆ. ಈಗಲಾದರೂ ತಾವು ಈ ಬಗ್ಗೆ ಯೋಚನೆ ಮಾಡಿ ಮೊದಲಿದ್ದಹಾಗೆ ಹಾಸನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಎಂದು ಮಾಡಿ ಪ್ರತ್ಯೇಕವಾದ ಯೂನಿಟ್ ಮಾಡುತ್ತೀರಾ ಅಥವಾ ಇದನ್ನು ಭದ್ರಾವತಿ ಕಾರ್ಖಾನೆಯ ಆಡಳಿತಕ್ಕೆ ಒಳಪಡಿಸುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಂ ವೀರಪ್ಪ ಮೊಯಿಲಿ.—ಈಗ ಕಾರ್ಮಿಕವರ್ಗದವರಿಗೂ ಮತ್ತು ಮಾಲೀಕ ವರ್ಗದವರಿಗೂ ಹೊಂದಾಣಿಕೆ ಇಲ್ಲ, ಅವರ ಮಧ್ಯೆ ಭಿನ್ನಾಭಿಪ್ರಾಯ ಇದೆ, ಇದರಿಂದಾಗಿ ಕಂಪನಿಗೆ ನಷ್ಟವಾಗಿದೆ ಎಂದು ಹೇಳುವುದಾದ್ದು ಸರಿಯಲ್ಲ. ಕಿಮ್ಕೋದ ಹಾಸನ ಮತ್ತು ಬೆಂಗಳೂರು ಯೂನಿಟ್‌ಗಳ ಏನೊಂದು ಪ್ರೊಡಕ್ಷನ್ ಮಾಡುತ್ತಿದ್ದಾರೆ ಈ ಪ್ರೊಡಕ್ಷನ್‌ಗೆ ಮಾರ್ಕೆಟ್‌ನಲ್ಲಿ ಕಾಂಪಿಟೇಷನ್ ಇದೆ. ಕಂಪನಿಯನ್ನು ಮಾಡುವಾಗ ಹಾಸನ ಯೂನಿಟ್‌ಗೆ ಸಾಕಷ್ಟು ಆರ್ಡರ್ಸ್ ಇತ್ತು. ಆದರೆ ಮಾರಾಟ ಬೆಲೆಯ ಮಟ್ಟಕ್ಕೆ ಅವನ್ನು ಪೂರೈಸುವುದಕ್ಕೆ ಆಗಲಿಲ್ಲ ಮತ್ತು ಆದಷ್ಟು ಕಡಿಮೆ ಬೆಲೆ ಇದ್ದದ್ದರಿಂದ ಎಷ್ಟೋ ಆರ್ಡರ್‌ಗಳನ್ನು ತೆಗೆದುಕೊಂಡಿಲ್ಲ. ಇದರಿಂದ ನಷ್ಟವಾಗಿದೆ. ಇದನ್ನು ನಾನು ಸಂಪೂರ್ಣ

ವಾಗಿ ಒಪ್ಪುತ್ತೇನೆ. ಈಗ ಕಂಪನಿ ಯಾವ ಒಂದು ನಷ್ಟದಲ್ಲಿ ನಡೆಯುತ್ತಿದೆ ಅದನ್ನು ಸರಿಪಡಿಸುವುದಕ್ಕೆ ಸಾಕಷ್ಟು ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಈಗ ಬಿ.ಇ.ಎಂ.ಎಲ್‌ರವರು 'ಬೆಂಗಳೂರು ಯೂನಿಟ್ಟನ್ನು ತೆಗೆದುಕೊಂಡು ನಾವು ಸುಧಾರಿಸುತ್ತೇವೆ' ಎಂದು ಹೇಳಿ ಅದನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿದ್ದಾರೆ. ನಾವು, ಈ ಬೆಂಗಳೂರು ಯೂನಿಟ್ಟನ್ನು ತೆಗೆದುಕೊಳ್ಳುವುದು ಸರಿಯಲ್ಲ. ಹಾಸನ ಯೂನಿಟ್‌ನ್ನು ತೆಗೆದುಕೊಂಡು ನೀವು ಸುಧಾರಿಸಿ ಎಂದು ಹೇಳಿದ್ದೇವೆ. ಅವರು ಯಾವುದನ್ನೂ ಒಪ್ಪಿಕೊಂಡಿಲ್ಲ. ಈ ಬಗ್ಗೆ ವ್ಯವಹಾರ ನಡೆಯುತ್ತಿದೆ. ಈಗ ಮ್ಯಾನೇಜಿಂಗ್ ಡೈರೆಕ್ಟರ್ ರಿಟೈರ್ ಆಗಿದ್ದಾರೆ. ಈಗ ಅಧ್ಯಕ್ಷರೂ ಬದಲಾವಣೆಯಾಗುತ್ತಾರೆ ಆದ್ದರಿಂದ ಹೊಸರೀತಿಯಲ್ಲಿ ಈ ಮ್ಯಾನೇಜ್‌ಮೆಂಟ್ ಬದಲಾವಣೆ ಆಗುವುದರಿಂದ ಮತ್ತು ಕಂಪನಿಗೆ ಬೇಕಾದ ಕಚ್ಚಾ ಸಾಮಾನುಗಳನ್ನು ಒದಗಿಸಿಕೊಂಡು ಮತ್ತು ಕಂಪನಿಯ ಮೇಲೆ ಇರತಕ್ಕಂಥ ಸಾಲದ ಹೊರೆಯನ್ನು ಸರಿಪಡಿಸಿಕೊಂಡು, ಇನ್ನು ಮೇಲೆ ಕಂಪನಿ ಉಪಯುಕ್ತವಾಗಿ ಕೆಲಸ ಮಾಡುವುದಕ್ಕೆ, ಅದು ವಿಶೇಷ ರೀತಿಯಲ್ಲಿ ಲಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಸಾಕಷ್ಟು ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ನಾನು ಬೇಳುವುದೇನೆಂದರೆ ಈ ಕಿಮ್ಕೋ ಕಂಪನಿಯನ್ನು ಮಾಡಿದ ಮೇಲೆ ಕ್ವಾಲಿಟಿ ಇಂಪ್ರೂವ್ ಆಗಲಿಲ್ಲ, ಇದರಿಂದ ಲಾಸ್ ಆಗುತ್ತಿದೆ. ಮೊದಲು ಈ ಹಾಸನದ ಫ್ಯಾಕ್ಟರಿ ಮತ್ತು ಇನ್ನೊಂದು ಕಂಪನಿಯನ್ನು ಜಾಯಿಂಟ್ ಮಾಡಿ ಕೆಲಸ ಪ್ರಾರಂಭ ಮಾಡಿದಾಗ ವಿಪರೀತ ವಿರ್ಚಾಯಿತು. ಇರತಕ್ಕಂಥ ಒಂದು ಪಬ್ಲಿಕ್ ಸೆಕ್ಟಾರ್ ಫ್ಯಾಕ್ಟರಿ ಹೋದರೆ ಜಿಲ್ಲೆಗೆ ಅದರಿಂದ ಲುಕ್ಸಾನು ಆಗುತ್ತದೆ ಎಂದರೂ ಕೇಳಲಿಲ್ಲ; ಮಾಡಿದರು, ಅದರಿಂದ ಲಾಸ್ ಆಯಿತು. ಆಗ ಕಾರ್ಮಿಕರಿಗೆ ಕೂಲಿ ಸರಿಯಾಗಿ ಕೊಡುವುದಕ್ಕೆ ಆಗಲಿಲ್ಲ. ಇವತ್ತು ಬೆಂಗಳೂರಿನ ಫ್ಯಾಕ್ಟರಿ ಪ್ರೆಮಿಸ್‌ನಲ್ಲಿ ಏರ್ ಕಂಡಿಷನ್ ಆಫೀಸ್ ಇಟ್ಟುಕೊಂಡು ಸಾವಿರಾರು ರೂಪಾಯಿ ಸಂಬಳ ಕೊಡುತ್ತಿದ್ದಾರೆ. ಅದೇನೇ ಇದ್ದರೂ ಈ ಕಿಮ್ಕೋ ಕಂಪನಿ ಎಂದು ಮಾಡಿರುವುದರಿಂದ ಬಹಳ ಲುಕ್ಸಾನು ಆಗುತ್ತಿದೆ. ಈಗ ಅದನ್ನು ತೆಗೆದು ಸಪರೇಟ್ ಯೂನಿಟ್ ಮಾಡುತ್ತಿರಾ ಅಥವಾ ಭದ್ರಾವತಿಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯವರ ಮ್ಯಾನೇಜ್ ಮೆಂಟಿಗೆ ಇದನ್ನು ಕೊಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಅಲ್ಲಿ ಏರ್ ಕಂಡಿಷನ್ ಆಫೀಸ್ ಇಟ್ಟುಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ, ಅದು ಸರಿಯಲ್ಲ. ಬೆಂಗಳೂರಿನ ಫ್ಯಾಕ್ಟರಿ ಪ್ರೆಮಿಸಸ್‌ನಲ್ಲಿ ಆಫೀಸ್ ಇದೆ. ಮಾನ್ಯ ಸದಸ್ಯರು ಈ ಹಾಸನ ಯೂನಿಟನ್ನು ವಿ ಐ.ಎಸ್.ಎಲ್‌ನವರು ತೆಗೆದುಕೊಳ್ಳಲಿ ಎಂದು ಹೇಳಿದರು. ಅವರು ಅದನ್ನು ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ ಏಕೆಂದರೆ they are not interested in it. ಅದೂ ಅಲ್ಲದೇ ಎರಡು ಮಾಲೀಕತ್ವ ಇದ್ದಾಗ ಅಡ್ಮಿನಿಸ್ಟ್ರೇಟಿವ್ ಕಾಸ್ಟ್ ಜಾಸ್ತಿಯಾಗುತ್ತದೆ. ಇದೂ ಒಂದು ಕಾರಣ. ಒಂದೇ ಮಾಲೀಕತ್ವ ಇದ್ದಾಗಲೂ ಕೂಡ ನಾವು ಓವರ್‌ಹೆಡ್ ಅಡ್ಮಿನಿಸ್ಟ್ರೇಟಿವ್ ಕಾಸ್ಟನ್ನು ರೆಡ್ಯೂಸ್ ಮಾಡಲಾಗಲಿಲ್ಲ. ಆದಾಗ್ಯೂ ಬೆಂಗಳೂರಿನಲ್ಲಿ ಒಂದೇ ಆಫೀಸ್ ಇರುವುದರಿಂದ ತೊಂದರೆಯಾಗಿದೆ ಎಂದು ಹೇಳುವುದು ಸರಿಯಲ್ಲ. ಮೂಲತಃ 'ಆ ರೀತಿ ತೊಂದರೆಯಾಗುವುದಕ್ಕೆ ಬೇರೆ ಬೇರೆ ಕಾರಣಗಳು ಇವೆ. ನನಗೆ ಗೊತ್ತಿರುವಂತೆ back log ಆರ್ಡರ್ಸ್ ಕಾರಣಗಳಿಂದ ತೊಂದರೆಯಾಗಿದೆಯೇ ಹೊರತು ಎರಡನ್ನೂ ಸೇರಿಸಿ ಒಂದೇ ಯೂನಿಟ್ ಮಾಡಿದ್ದರಿಂದ ತೊಂದರೆಯಾಗಿದೆ ಎಂಬ ವಾದ ಸಂಪೂರ್ಣವಾಗಿ ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಇದರಲ್ಲಿ ಕಿಮ್ಕೋ ಫ್ಯಾಕ್ಟರಿ ಕೇವಲ ಹಾಸನಕ್ಕೆ ಸಂಬಂಧಪಟ್ಟಿಲ್ಲ, ಈ ರಾಜ್ಯಕ್ಕೇ ಸಂಬಂಧಪಟ್ಟಿದೆ. ಇದು ನಷ್ಟ ಹೊಂದುವುದಕ್ಕೆ ಕಾರಣ ಎಂದರೆ ಇತರ ಉತ್ಪಾದಕರ ಪೈಪೋಟಿ ಇರುವುದು ಮತ್ತು ಮಾರಾಟ ಬೆಲೆಗಳನ್ನು ವಿರಿಸಿರುವುದು ಇದಕ್ಕೆ ಕಾರಣ. ಈಗಾಗಲೇ ಪೈಪೋಟಿ ಇರುವುದರಿಂದ ಲಕ್ಷಾಂತರ ರೂಪಾಯಿಗಳಷ್ಟು ಇಂಪ್ಲಿಮೆಂಟ್ಸ್ ಸ್ಟಾಕ್ ಬಿದ್ದಿದೆ. ಬೆಲೆಗಳನ್ನು ಹೆಚ್ಚಿಸಿರುವುದರಿಂದ ಅವುಗಳನ್ನೆಲ್ಲಾ ಮಾರಾಟ ಮಾಡುವುದಕ್ಕೆ ಅನುಕೂಲವಾಗಿಲ್ಲ. ಈಗ ಪೈಪೋಟಿ ಮಾಡುತ್ತಿರತಕ್ಕಂಥ ಟಿಸ್ಕೋ ಕಂಪನಿಯವರು ಮತ್ತು ಕುಮಾರ್ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯವರು ಏನು ಇಂಪ್ಲಿಮೆಂಟ್ಸನ್ನು ಉತ್ಪಾದನೆ ಮಾಡುತ್ತಾರೆ ಅದನ್ನು ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದಾರೆ. ಟಿಸ್ಕೋ ಕಂಪನಿಯವರು ಕುಮಾರ್ ಫ್ಯಾಕ್ಟರಿಯವರಿಗೆ ಕಚ್ಚಾ ವಸ್ತುಗಳನ್ನು ಕಡಿಮೆ ಬೆಲೆಗೆ ಕೊಡುತ್ತಿದ್ದಾರೆ, ವಿ.ಐ.ಎಸ್.ಎಲ್‌ರವರು ಮಾರ್ಕೆಟ್ ರೇಟ್‌ನಲ್ಲಿ ಕೊಡುತ್ತಿದ್ದಾರೆ. ನಮ್ಮಲ್ಲಿ ಮಾರಾಟದ ಬೆಲೆ ಜಾಸ್ತಿ ಮಾಡಿರುವುದರಿಂದ ಮತ್ತು ಅವರ ಪೈಪೋಟಿ ಇರುವುದರಿಂದ ಇದರಲ್ಲಿ ಲುಕ್ಸಾನು

ಆಗುತ್ತಾ ಇದೆ. ಅದನ್ನು ವಿ.ಐ ಎಸ್.ಎಲ್‌ನವರ ಮ್ಯಾನೇಜ್‌ಮೆಂಟಿಗೆ ಕೊಟ್ಟರೆ ಅದು ಲಾಭದಾಯಕವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಬಗ್ಗೆ ಸರ್ಕಾರದವರ ಅಭಿಪ್ರಾಯವನ್ನು ನಾನು ತಿಳಿದುಕೊಳ್ಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲೀ.—ವಿ ಐ.ಎಸ್.ಎಲ್ ಕಾರ್ಖಾನೆಯವರು ಇದನ್ನು ತೆಗೆದುಕೊಂಡು ನಡೆಸುವಂಥ ಪ್ರಪೋಸಲ್ ಈಗ ಸರ್ಕಾರದವರ ಮುಂದೆ ಇಲ್ಲ. ಈ ಕಚ್ಚಾ ಮಾಲನ್ನು ಸರಬರಾಜು ಮಾಡುವ ವಿಚಾರದಲ್ಲಿ ಕೂಡ ಪ್ರಾಮುಖ್ಯವಾಗಿ ಟಿಸ್ಕೋ ಮತ್ತು ಇತರ ಕಂಪನಿಯವರು ಅವರೆಲ್ಲಾ ಅವರ ಫ್ಯಾಕ್ಟರಿಯಲ್ಲೇ ಅದನ್ನು ತಯಾರು ಮಾಡಿ ಕೊಳ್ಳುತ್ತಾರೆ; ಮತ್ತು ಅದನ್ನು ಸರಬರಾಜು ಮಾಡುತ್ತಾರೆ; ನಾವು ಕೂಡ ಈ ರಾಮೆಟೀರಿಯಲ್ಸನ್ನು ಸಪ್ಲೈ ಮಾಡುವ ದಿಶೆಯಲ್ಲಿ ವಿಚಾರ ಮಾಡುತ್ತಿದ್ದೇವೆ. ಈ ಬಗ್ಗೆ ನಾವು ಕೂಲಂಕಷವಾಗಿ ಪುನರಾಲೋಚನೆ ಮಾಡುತ್ತೇವೆ. ಇನ್ನು ಮ್ಯಾನೇಜ್‌ಮೆಂಟ್ ವಿಚಾರದಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ಈ ಕಚ್ಚಾ ಸಾಮಾನುಗಳನ್ನು ಈಗ ಸದ್ಯಕ್ಕೆ ವಿ.ಐ ಎಸ್.ಎಲ್‌ನಿಂದ ತರಿಸಿಕೊಳ್ಳುವ ಬಗ್ಗೆ ನಾವು ಅದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ಈ ಹಾಸನ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯ ಆವರಣದಲ್ಲಿ ಕೆಲವು ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ಮಿಷಿನರಿಗಳನ್ನು ತರಿಸಿ ಇಟ್ಟಿದ್ದಾರೆ, ಅದನ್ನು ಸ್ಟಾರ್ಟ್ ಮಾಡಲಿಲ್ಲ. ಅವುಗಳನ್ನು ೫-೬ ವರ್ಷಗಳ ಹಿಂದೆ ತರಿಸಿದ್ದರೂ ಕೂಡ ಅದನ್ನು ಸ್ಟಾರ್ಟ್ ಮಾಡದೇ ಇರುವುದಕ್ಕೆ ಕಾರಣವೇನು? ಅದನ್ನು ತರಿಸಿದವರು ಯಾರು? ಅದನ್ನು ಸ್ಟಾರ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಮೊದಲನೆಯ ವಿಚಾರ. ಆ ಮೇಲೆ ಈ ಕಿಮ್ಮೋ ಎಲ್ಲದರಲ್ಲೂ ಫೈಲ್ಯೂರ್ ಆಗಿರುವುದರಿಂದ ಅದನ್ನು ಸಪರೇಟ್ ಯೂನಿಟ್ ಮಾಡಬೇಕು ಇದು ಎರಡನೆಯ ವಿಚಾರ. ಏಕೆಂದರೆ ಹಾಸನ ಜಿಲ್ಲೆಯಲ್ಲಿ ಇರತಕ್ಕಂಥಾದ್ದು ಇದು ಒಂದೇ ಒಂದು ಪಬ್ಲಿಕ್ ಸೆಕ್ಟಾರ್. ಇದನ್ನು ಮುಚ್ಚುವ ತಕ್ಕಂಥ ಸ್ಥಿತಿಗೆ ಬಂದರೆ ಈ ರಾಜ್ಯಕ್ಕೇ ಬಹಳ ಲಾಸ್ ಆಗುತ್ತದೆ. ತಾವು ಹೇಗೂ ಇದನ್ನು ವಿ.ಐ.ಎಸ್. ಎಲ್‌ನವರಿಗೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದೀರಿ, ಅದು ಹೋಗಲಿ; ಇದನ್ನು ಸಪರೇಟ್ ಯೂನಿಟ್ ಮಾಡುವುದಕ್ಕೆ ತಾವು ಯೋಚನೆ ಮಾಡುತ್ತೀರಾ? ಈ ಬಗ್ಗೆ ಸರ್ಕಾರದವರ ಅಭಿಪ್ರಾಯವೇನು?

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಆ ಫ್ಯಾಕ್ಟರಿಗೆ ವಿಶೇಷವಾದಂಥ ಕಾಯಕಲ್ಪ ಬೇಕು ಏನ್ನುವುದನ್ನು ನಾನು ಸರ್ವಥಾ ಒಪ್ಪುತ್ತೇನೆ. ನಿನ್ನೆ ತಾನೆ ಕಚ್ಚಾ ಮಾಲು ಸಪ್ಲೈ ವಿಚಾರದಲ್ಲಿ ವಿ.ಐ. ಎಸ್.ಎಲ್ ಜೊತೆಯಲ್ಲಿ ಮಾತುಕತೆ ನಡೆಸಿದ್ದೇವೆ. ಬೇರೆ ಬೇರೆ ಕಾರ್ಯಕ್ರಮ ತೆಗೆದುಕೊಳುತ್ತಾ ಇದ್ದೇವೆ. ಮಾನ್ಯ ಸದಸ್ಯರು ಹೇಳುವಂಥ ವಿಚಾರ ಸರಿಯಲ್ಲ ಎಂದು ಹೇಳುತ್ತಾ ಇಲ್ಲ ಇದನ್ನು ಇಂಪ್ರೂವ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ.

Misappropriations in Co-operative Societies in Mysore District.

395 H. VISWANATH (Krishnarajanagar).—Will the Minister for Co-operation be pleased to state :—

(a) the total amount mis-appropriated so far in a the Co-operative Societies in Mysore District (Taluk wise details may be furnished) ;

(b) the number of Civil & Criminal cases filed against mis-appropriation and the number of cases in which action has not been taken to file Civil & Criminal cases ? (Talukwise informations may be furnished).

SRI A. B. JAKANUR (Minister for Co-operation).—

(a) In all a total sum of Rs. 29,64,951-94 is mis-appropriated in 248 cases in 180 Co-operative Societies of 11 Taluks of Mysore District.